# ಅವಘಡ ಸಂದರ್ಭ ಮಾನವೀಯತೆ ತೋರಿ: ವಿವಿ ಕುಲಪತಿ

■ **ವಿಕ ಸುದ್ದಿಲೋಕ** ಮಂಗಳಗಂಗೋತ್ರಿ

''ಯಾವುದೇ ಅವಘಡ, ಅಪಘಾತ ಸಂಭವಿಸಿದ ತಕ್ಷಣ ಫೋಟೋ, ವಿಡಿಯೋ ತೆಗೆಯುವ ಬದಲು ಗಾಯಾಳುಗಳಿಗೆ ಮಾನವೀಯತೆಯೊಂದಿಗೆ ಪ್ರಥಮ ಚಿಕಿತ್ಸೆ ನೀಡಿ ಬದುಕಿಸುವ ಪ್ರಯತ್ನ ನಮ್ಮದಾಗಬೇಕು. ಯುವ ಸಮುದಾಯ, ವಿದ್ಯಾರ್ಥಿಗಳು ಇಂತಹ ಪ್ರಥಮ ಚಿಕಿತ್ಸೆ ಮಾಹಿತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅರಿವನ್ನು ಹೆಚ್ಚಿಸುವುದರೊಂದಿಗೆ ಹಳ್ಳಿಯ ಜನತೆಗೂ ಈ ಕುರಿತು ಮಾಹಿತಿ ಒದಗಿಸುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬಹುದು,'' ಎಂದು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಹೇಳಿದರು.



**ಬೀದಿನಾಯಿಗಳು ಹಾಗೂ ಪ್ರಾಣಿಗಳ ಸಂರಕ್ಷಕಿ ರಜನಿ ದಾಮೋದರ ಶೆಟ್ಟಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.**

ಮಂಗಳೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಹಾಗೂ ವಿದ್ಯಾರ್ಥಿ ಪರಿಷತ್ತು ವತಿಯಿಂದ ಮಂಗಳ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಥಮ ಚಿಕಿತ್ಸಾ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

''ನಮಗೆ ಚಿಕಿತ್ಸೆ, ಆರೋಗ್ಯ ರಕ್ಷಣೆಯ ಮೂಲಕ ಮರುಜೀವ ಕೊಡುವವರು ವೈದ್ಯರು. ಆದ್ದರಿಂದ ವೈದ್ಯರ ಸೇವೆಯ ಬಗ್ಗೆ ಸದಾ ಗೌರವವಿರಬೇಕು,'' ಎಂದರು.

ಸಂಪನ್ಮೂಲ ವ್ಯಕ್ತಿ, ನಿಟ್ಟೆ ಕ್ಷೇಮ ಆಸ್ಪತ್ರೆಯ ವೈದ್ಯ ಪ್ರೊ. ಶ್ರೀಪಾದ ಜಿ. ಮಾತನಾಡಿ, ''ಈಗ ಆಧುನಿಕತೆ, ತಂತ್ರಜ್ಞಾನದ ಯುಗವಾಗಿದೆ. ಮನುಷ್ಯನಿಗೆ ಎದುರಾಗುವ ಯಾವುದೇ ಅವಘಡಗಳ ಸಂದರ್ಭದಲ್ಲಿ ಮಾಹಿತಿಯೊಂದಿಗೆ ನಾವು ವಿವೇಕಪೂರ್ಣವಾಗಿ ವ್ಯವಹರಿಸಿದರೆ ಅಪಾಯಕಾರಿ ಸಂದರ್ಭದಲ್ಲಿಯೂ ಜೀವ ಉಳಿಸಬಹುದು. ಈ ನಿಟ್ಟಿನಲ್ಲಿ ಇಂತಹ ಕಾರ್ಯಾಗಾರ ಪ್ರಯೋಜನಕಾರಿಯಾಗಿದೆ,'' ಎಂದರು.

ಬೀದಿನಾಯಿಗಳು ಹಾಗೂ ಪ್ರಾಣಿಗಳ ಸಂರಕ್ಷಕಿ ರಜನಿ ದಾಮೋದರ ಶೆಟ್ಟಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ನಿರ್ದೇಶಕ ಪ್ರೊ. ಪ್ರಶಾಂತ್ ನಾಯ್ಕ್ ಪ್ರಾಸ್ತಾವಿಕ ಮಾತನಾಡಿದರು. ರಕ್ಷಿತ್ ಕಾರ್ಯಕ್ರಮ ನಿರೂಪಿಸಿದರು.